ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಈ ಮಹಾರಾಷ್ಟ್ರ ಎಂಪ್ಲಾಯಿಮೆಂಟ್ ಗ್ಯಾರಂಟಿ ಆಕ್ಟಿನ ಪ್ರತಿಯನ್ನು ತಮ್ಮ ಕಡೆ ಕಳುಹಿಸಿ ಕೊಡುತ್ತೇನೆ.

MR SPEAKER : The irony of the situation is that, this question has not been answered. I will direct the government ಇದು ಯಾರಿಗೆ ಸಂಬಂಧಪಡುತ್ತದೆ they should be able to furnish the answer at least .....

ಶ್ರೀ ವಾಟಾಳ್ ನಾಗರಾಜ್ : ಸಂಬಂಧಪಡದ 3ಜನ ಮಂತ್ರಿಗಳು ಉತ್ತರಿಸಿದರು. ಮುಖ್ಯ ಮಂತ್ರಿಗಳು ಬಂದಿದ್ದಾರೆ. ನಿಮ್ಮದು ಉತ್ತರ ಬಂದರೆ 4 ಜನರಿಂದ ಮುಕ್ತಾಯವಾಗಬಹುದು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಹಕಾರಿ ಮಂತ್ರಿಗಳು ಎತ್ತಿದ ಪ್ರಶ್ನೆಗೆ ನಾನು ಉತ್ತರ ಕೊಡುತ್ತಿದ್ದೇನೆ. ಈ ಎಂಪ್ಲಾಯಿಮೆಂಟ್ ಆಕ್ಟಿನಲ್ಲಿ ಪ್ರೊಡಕ್ಟೀವ್ ಎಂಪ್ಲಾಯಿಮೆಂಟ್ ಇದೆ. ಇದನ್ನೇ ತಾವು ರೂಪಿಸಬಹುದು. ಅದಕ್ಕೆ ಅವಕಾಶ ಇದೆ. ಮಾಡಬೇಕು.

ಮಿಲ್ಲರ್ ಕೆರೆ ಅಂಗಳದ ಗುಡಿಸಲು ವಾಸಿಗಳ ಪುನರ್ವಸತಿ.

1244 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಿಲ್ಲರ್ ಕೆರೆ ಅಂಗಳದ ಮಳೆ ನೀರಿನ ದೊಡ್ಡ ಚರಂಡಿಯ ಪಕ್ಕದಲ್ಲಿ ಸ್ಥಳಾಂತರಿಸಿದ 62 ಗುಡಿಸಲು ವಾಸಿಗಳು ಇರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) ಭಾರತ ಸರ್ಕಾರದ ಹಿಂದಿನ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಅವರುಗಳಿಗೆ ಪುನರ್ ವಸತಿ ಕಲ್ಪಿಸುವುದಾಗಿ ಆಶ್ವಾಸನೆ ನೀಡಿದ್ದು, ಅವರುಗಳಿಗೆ ಪುನರ್ ವಸತಿ ಕಲ್ಪಿಸಲು ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಗಿದೆಯೇ?

ಇ) ಈವರೆಗೆ ಅವರುಗಳಿಗೆ ಪುನರ್ ವಸತಿ ಕಲ್ಪಿಸಲು ಕ್ರಮ ತೆಗೆದುಕೊಳ್ಳದಿರುವುದು ಸಹ ನಿಜವಲ್ಲವೇ?

ಈ) ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ನಿರ್ದೇಶನದ ಮೇರೆಗೆ ಅವರುಗಳನ್ನು ಆ ಪ್ರದೇಶದಿಂದ ಕರುಣೆಯಿಲ್ಲದೆ ಹೊರ ಹಾಕಲು ನಗರ ಪಾಲಿಕೆಯು ಪ್ರಯತ್ನಿಸುತ್ತಿರುವುದು ನಿಜವೇ?

ಉ) ಕೊಳಚೆ ನಿರ್ಮೂಲನ ಯೋಜನೆಯಡಿ ಅಥವಾ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸ್ಥಳಾಂತರಿಸಿದ ವ್ಯಕ್ತಿಗಳ ಪುನರ್ವಸತಿ ಯೋಜನೆಯಡಿ ಈ ಗುಡಿಸಲು ನಿವಾಸಿಗಳಿಗೆ ತಕ್ಷಣವೇ ಪುನರ್ವಸತಿ ಕಲ್ಪಿಸಲು ನಗರ ಪಾಲಿಕೆಯ ಅಧಿಕಾರಿಗಳಿಗೆ ಸರ್ಕಾರವು ನಿರ್ದೇಶನವನ್ನು ನೀಡುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) 72 ಗುಡಿಸಲು ನಿವಾಸಿಗಳಿದ್ದಾರೆ.

ಆ) ಹೌದು

ಇ) ಈ ಗುಡಿಸಲು ನಿವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ

ಉ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೇ ನನ್ನ ಭಾವನೆಯಲ್ಲಿ ಮೊದಲನೆಯದಾಗಿ ಈ ಉತ್ತರ ಸಮಂಜಸವಾಗಿಲ್ಲ. ಎರಡನೆಯದಾಗಿ ಮೂಲಭೂತವಾದ ವಿಷಯವಿದೆ. ಅದನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. 62 ಗುಡಿಸಲು ವಾಸಿಗಳು ಅಲ್ಲಿದ್ದಾರೆ ಎಂದು ನಾನು ಹೇಳಿದ್ದೇನೆ. ಆದರೆ ಇವರು 72 ಇದೆ ಎಂದು ಹೇಳಿದ್ದಾರೆ. ಇದ್ದಕ್ಕಿದ್ದ ಹಾಗೆ ಹತ್ತು ಹೇಗೆ ಜಾಸ್ತಿ ಆಯಿತೆಂಬುದನ್ನು ಮಂತ್ರಿಗಳು ಹೇಳಬೇಕು. ನನಗೆ ಗೊತ್ತಿದ್ದ ಹಾಗೆ, 62 ಗುಡಿಸಲುಗಳು ಇರುವುದನ್ನು ನಾನು ಸುಮಾರು ಎರಡು ವರ್ಷಗಳಿಂದ ನೋಡುತ್ತಿದ್ದೇನೆ. ಕೇಂದ್ರದಲ್ಲಿ ಮೊಹಿಸಿನ ಕಿದ್ವಾಯಿಯವರು ಹೌಸಿಂಗ್ ಮಿನಿಸ್ಟರ್ ಆಗಿದ್ದಾಗ ಅಂದಿನ ನಗರಸಭೆಯ ಅಡ್ಮಿನಿಸ್ಟ್ರೇಟರ್ ಗೆ ತಿಳಿವಳಿಕೆ ಕೊಟ್ಟು ಇವರಿಗೆ ಪುನರ್ ವಸತಿ ಸೌಕರ್ಯ ಮಾಡಿಕೊಡಬೇಕೆಂದು ಹೇಳಿ ಆಗ ನನಗೆ ಈ ಜವಾಬ್ದಾರಿಯನ್ನು ವಹಿಸಿದ್ದರು. ಆಗಿನಿಂದ ನಾನು ನೋಡುತ್ತಿದ್ದೇನೆ, 62 ಇದೆ. 62 ಇದ್ದದ್ದು ಇದ್ದಕ್ಕಿದ್ದ ಹಾಗೆ 72 ಹೇಗೆ ಆಯಿತು? ಈ 62ರ ಜೊತೆಗೆ ನಗರಸಭೆಯವರು ಇನ್ನು ಹತ್ತು ಜನರಿಗೆ ಅವಕಾಶ ಮಾಡಿಕೊಡುವುದಾದರೆ ನನ್ನ ಅಭ್ಯಂತರವಿಲ್ಲ.

12.15 ಪಿ.ಎಂ.

ಶ್ರೀ ಕೆ.ಜೆ.ಜಾರ್ಜ್ : ಸನ್ಮಾನ್ಯ ಅಧ್ಯಕ್ಷರೆ, ಈಗ ನನಗೆ ದೊರೆತಿರತಕ್ಕ ದಾಖಲೆ ಪ್ರಕಾರ 72 ಜನ ಇದ್ದಾರೆ. ಸನ್ಮಾನ್ಯ ಸದಸ್ಯರು 62 ಎಂದು ಹೇಳುತ್ತಿದ್ದಾರೆ. ಬೇಕಾದರೆ ನಮ್ಮ ಕಮಿಷನರ್ ರವರನ್ನು ಕಳುಹಿಸಿ ಇನ್ನೊಂದು ಸಾರಿ ವೆರಿಫೈ ಮಾಡಲಿಕ್ಕೆ ಹೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಹತ್ತು ಹೇಗೆ ಜಾಸ್ತಿಯಾಯಿತು?

ಅಧ್ಯಕ್ಷರು : ನಿಮಗೆ ಗೊತ್ತಿದ್ದರೆ ಪ್ರಶ್ನೆ ಏತಕ್ಕೆ ಕೇಳುತ್ತೀರಿ? ಗೊತ್ತಿಲ್ಲದೇ ಇರುವುದಕ್ಕೆ ಉತ್ತರ ತೆಗೆದುಕೊಳ್ಳುವುದಕ್ಕೆ ಪ್ರಶ್ನೆ ಕೇಳುವುದು. ನನಗೆ ಗೊತ್ತಿದೆ ಪ್ರಶ್ನೆ ಕೇಳುತ್ತಿದ್ದೇನೆ. ಅಂದರೆ ಅದು ಪ್ರಶ್ನೆ ಅಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಅದಕ್ಕೆ ಮುಂದೆ ಬರುತ್ತೇನೆ. ಮಾನ್ಯ ಅಧ್ಯಕ್ಷರೇ ಅವರಿಗೆ ಪುನರ್ವಸತಿ ಸೌಕರ್ಯ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ 10-15-20 ದಿನದ ಕೆಳಗೆ ಆ ಗುಡಿಸಲು ಒಡೆಯಬೇಕು ಎಂದು ಕಮೀಷನರ್ ಮತ್ತು ಮುಖ್ಯ ಇಂಜಿನಿಯರ್ ರವರು ಬಹಳ ತೀವ್ರತೆಯಿಂದ ಹೋಗಿದ್ದರು. ಆ ವಿಷಯ ನನಗೆ ಗೊತ್ತಿದೆ. ಅದು ಇಲ್ಲ ಎಂದು ಹೇಳಿ ಮುಂದಕ್ಕೆ ಬಂದಿದ್ದಾರೆ. ನಾನು ಆವತ್ತು ಕೇಳಿದಾಗ ಕಮಿಷನರ್ ನನಗೆ ಹೇಳಿದರು. ನಮ್ಮ ಮಂತ್ರಿಗಳು ಹೇಳಿದ್ದಾರೆ, ಬೇಕಾದರೆ ನೀವು ಮಂತ್ರಿಗಳನ್ನು ಕೇಳಿ ಎಂದು ಟೆಲಿಫೋನ್ ನಲ್ಲಿ ಹೇಳಿದರು. ಆಗ ಮಂತ್ರಿಗಳನ್ನು ಕಾಂಟಾಕ್ಟ್ ಮಾಡಲಿಕ್ಕೆ ಪ್ರಯತ್ನಮಾಡಿದೆ. ಅವರು ಸಿಗಲಿಲ್ಲ. ಈಗ ದಯವಿಟ್ಟು ಮಂತ್ರಿಗಳು ಹೇಳುತ್ತೀರಾ?

ಅಧ್ಯಕ್ಷರು : ಈಗ ಸಿಕ್ಕಿದ್ದಾರೆ ಕೇಳಿ.

ಶ್ರೀ ಎ.ಕೆ. ಅನಂತಕೃಷ್ಣ: ಅದಕ್ಕೇ ತಮ್ಮ ಸಹಾಯ ಪಡೆದು ತಮ್ಮ ರಕ್ಷಣೆಯಿಂದ ಕೇಳುತ್ತಿದ್ದೇನೆ. ಮಂತ್ರಿಗಳು ಹೇಳಿ ಗುಡಿಸಲು ಒಡೆಯುವುದಕ್ಕೆ ಮನಸ್ಸು ಮಾಡಿದರಾ ಅಥವಾ ಹೌಸಿಂಗ್ ಮತ್ತು ಅರ್ಬನ್ ಡೆವಲಪ್ಮೆಂಟ್ ಸೆಕ್ರೆಟರಿ ಹೇಳಿದರು ಎಂದು ಮತ್ತೊಂದು ಕಡೆ ಹೇಳಿದರು. ಹಾಗೆ ಅವರು ಹೇಳಿ ಮಾಡಿದರೇ ಇಲ್ಲವೇ ಕಮಿಷನರ್ ಮತ್ತು ಮುಖ್ಯ ಇಂಜಿನಿಯರೇ ಮನಸ್ಸು ಮಾಡಿ ಮಾಡಿದರಾ ಎನ್ನುವುದನ್ನು ದಯವಿಟ್ಟು ಹೇಳಿ?

ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಅಧ್ಯಕ್ಷರೆ, ಅವರ ಮೂರನೇ ಪ್ರಶ್ನೆಗೆ ಈಗಾಗಲೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ನಿರ್ದೇಶನದ ಮೇರೆಗೆ ಅವರುಗಳನ್ನು ಆ ಪ್ರದೇಶದಿಂದ ಕರುಣೆಯಿಲ್ಲದೆ ಹೊರ ಹಾಕಲು ನಗರಪಾಲಿಕೆಯು ಪ್ರಯತ್ನಿಸುತ್ತಿರುವುದು ನಿಜವೆ ಎಂದು ಕೇಳಿದ್ದಾರೆ. ಇಲ್ಲ ಎಂದು ಹೇಳಿದ್ದೇನೆ. ಮತ್ತೇ ಅದೇ ಪ್ರಶ್ನೆ ಅವರು ಕೇಳುತ್ತಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆ ಏನು ಎಂದು ಅವರಿಗೆ ತಿಳಿವಳಿಕೆ ಮಾಡುತ್ತೇನೆ. " Is it true that all efforts are being made to throw them mercilessly from the area by the corporation authorities on the direction of the Hon'ble Minister for housing and Urban Development." ಎಂದು ಕೇಳಿದ್ದೇನೆ. ಅವರಲ್ಲದಿದ್ದರೆ ಇನ್ನು ಯಾರಿಂದ ಆಯಿತು ಎಂದು ಕೇಳಿದ್ದೇನೆ.

ಅಧ್ಯಕ್ಷರು: ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ: ಅವರು ಮಾಡಿಲ್ಲ ಎಂದು ಹೇಳುತ್ತಾರೆ. ಮಂತ್ರಿಗಳು ಡೈರೆಕ್ಷನ್ ಕೊಟ್ಟರೇ? ಇಲ್ಲವೇ ಹೌಸಿಂಗ್ ಮತ್ತು ಅರ್ಬನ್ ಡೆವಲಪ್ಮೆಂಟ್ ಸೆಕ್ರೆಟರಿ ಕೊಟ್ಟರೇ?

ಶ್ರೀ ಕೆ.ಜೆ. ಜಾರ್ಜ್: ತಮಗೆ ಗೊತ್ತಿರುವ ಹಾಗೆ ಈ ಮಿಲ್ಲರ್ ಟ್ಯಾಂಕ್ ರೋಡ್‌ನಲ್ಲಿ ಒಂದು ದೊಡ್ಡ ಸ್ಲಂ ಇತ್ತು. ಸರ್ಕಾರದ ವತಿಯಿಂದ ಸಾಕಷ್ಟು ಹಣ ಖರ್ಚು ಮಾಡಿ ಆ ಸ್ಲಮ್ಮನ್ನು ಬೇರೆ ಕಡೆಗೆ ಷಿಫ್ಟ್ ಮಾಡಿದ್ದೇವೆ. ಗೌರ್ನಮೆಂಟ್‌ನಿಂದ ಏನು ಹೇಳಿದ್ದೇವೆಂದರೆ, ಆ ಮಿಲ್ಲರ್ ಟ್ಯಾಂಕ್ ರೋಡ್‌ನಲ್ಲಿ ಈಗ ಅಂಬೇಡ್ಕರ್ ಭವನ ಬರಬೇಕು, ಆದ್ದರಿಂದ ಅಲ್ಲಿ ಹೊಸ ಸ್ಲಂಗಳು ಬರದಂತೆ ನೋಡಿಕೊಳ್ಳಿ ಎಂದು ಹೇಳಿದ್ದೇನೆ. ಈ 72 ಮನೆಗಳು ಯಾವುವಿದೆ ಇವರಿಗೆ ಬೇರೆ ಸೌಕರ್ಯ ಒದಗಿಸಿ ಷಿಫ್ಟ್ ಮಾಡುತ್ತೇವೆ.

ಶ್ರೀ ಎ.ಕೆ. ಅನಂತ ಕೃಷ್ಣ : ಅಧ್ಯಕ್ಷರೇ, ಅವರು ಏನು ಹೇಳುತ್ತಾರೆ....

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಎಚ್. ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಜಿಲ್ಲೆಗಳ ಪುನರ್‌ರಚನೆಯ ಬಗ್ಗೆ ವಿವಿಧ ಸಮಿತಿಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳ ಆಧಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ.

368 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೌರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕ್ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆಗಳ ಪುನರ್‌ರಚನೆಯ ಕುರಿತು ಇದುವರೆವಿಗೂ ಯಾವ ಯಾವ ಸಮಿತಿಗಳು ತಮ್ಮ ವರದಿಗಳನ್ನು ಸರ್ಕಾರಕ್ಕೆ ನೀಡಿವೆ?

ಆ) ಈ ಸಮಿತಿಗಳು ನೀಡಿರುವ ವರದಿಯನ್ನು ಅಧ್ಯಯನ ಮಾಡುವ ಸಲುವಾಗಿ ರಚಿಸಿರುವ ಸಂಪುಟದ ಉಪ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ?